**<u>ನನ್ನನ್ನು ಪರೀಕ್ಷಿಸಿ</u>**

ನನ್ನನ್ನು ಪರೀಕ್ಷಿಸಿ ಸಂಪೂರ್ಣ ತಿಳುಕೊಂಡಿದ್ದೀ,
ನನ್ನಾಲೋಚನೆ ಎಲ್ಲವ ಬಲ್ಲವನಾಗಿರುತ್ತೀ

ನಾ ನಿನ್ನ ಆತ್ಮಕ್ಕೆ ತಪ್ಪಿಸಿಕೊಂಡು ಎಲ್ಲಿಗೆ ಹೋಗಲಿ
ನಾ ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ
ಮೇಲಕ್ಕೆ ಏರಿ ಹೋದರೂ, ಅಲ್ಲಿಯೂ ನೀನಿರುತ್ತೀ
ಪಾತಾಳಕ್ಕಿಳಿದು ಮರೆಯಾದರೂ ಅಲ್ಲಿಯೂ ನೀನಿರುತ್ತೀ

ದೇವಾ ನನ್ನನ್ನು ಪರೀಕ್ಷಿಸಿ ಹೃದಯವಂ ತಿಳುದುಕೋ
ನನ್ನ ಆಲೋಚನೆಗಳನ್ನೆಲ್ಲಾ ನೀನೇ ಶೋಧಿಸು
ಕೇಡಿನ ಮಾರ್ಗದಿಂದ ನನ್ನನ್ನು ತಪ್ಪಿಸು,
ಸನಾತನ ಮಾರ್ಗದಲ್ಲಿ ನನ್ನನ್ನು ನಡೆಸು